**೧೪. ಸಾರ್ವಜನಿಕ ಉಪಯೋಗಕ್ಕಾಗಿ ಗ್ರಂಥಾಲಯವನ್ನು ಅಥವಾ ವಾಚನಾಲಯವನ್ನು ನಿರ್ವಹಿಸುತ್ತಿದ್ದಲ್ಲಿ ಅದರ ಕೆಲಸದ ಸಮಯವನ್ನೊಳಗೊಂಡಂತೆ ಮಾಹಿತಿ ಪಡೆಯಲು ಸಾರ್ವಜನಿಕರಿಗೆ ಲಭ್ಯವಿರುವ ಸೌಲಭ್ಯಗಳ ವಿವರಗಳು (ಕಲಂ ೪ (೧)(ಬಿ) (XV)**

## ಸರಸ್ವತೀ ಭಂಡಾರ

ಕನ್ನಡ ಸಾಹಿತ್ಯ ಪರಿಷತ್ತಿನ ವತಿಯಿಂದ ಸಾರ್ವಜನಿಕ ಉಪಯೋಗಕ್ಕಾಗಿ ಗ್ರಂಥಾಲಯವನ್ನು ಮತ್ತು ವಾಚನಾಲಯವನ್ನು ನಿರ್ವಹಿಸಲಾಗುತ್ತಿದೆ. ಈ ಗ್ರಂಥಾಲಯದಲ್ಲಿ ದಿನಪತ್ರಿಕೆಗಳು, ನಿಯತಕಾಲಿಕೆಗಳು, ಮಕ್ಕಳ ಪುಸ್ತಕಗಳು, ಸಂಶೋಧನಾ ಗ್ರಂಥಗಳು, ಹಾಗೂ ತಾಳೆಗರಿಯ ಹಸ್ತಪ್ರತಿಗಳನ್ನು ಇರಿಸಲಾಗಿದೆ. ಇದಲ್ಲದೆ ಕಾದಂಬರಿಗಳು, ಪರಿಷತ್ತಿನ ದತ್ತಿ ಪ್ರಶಸ್ತಿಗಳಿಗಾಗಿ ಬರುವ ಪುಸ್ತಕಗಳು, ಖರೀದಿಸುವ ಪುಸ್ತಕಗಳು, ಪರಿಷತ್ತಿನ ವತಿಯಿಂದ ಪ್ರಕಟವಾದ ಪುಸ್ತಕಗಳು ಹಾಗೂ ಇನ್ನಿತರ ಪುಸ್ತಕಗಳು ಲಭ್ಯವಿರುತ್ತವೆ. ಸಾರ್ವಜನಿಕರು ಗ್ರಂಥಾಲಯವು ತೆರೆದಿರುವ ಸಮಯದಲ್ಲಿ ಅವುಗಳ ಉಪಯೋಗವನ್ನು ಪಡೆಯಬಹುದಾಗಿದೆ. ಆದರೆ ಸರಸ್ವತೀ ಭಂಡಾರದ (ಗ್ರಂಥಾಲಯದ) ಸದಸ್ಯರು ಮಾತ್ರ ಎರಡು ಪುಸ್ತಕಗಳನ್ನು ಎರವಲು ಪಡೆದು ನಿಯಮಾನುಸಾರ ತಮ್ಮ ಬಳಿ ಇಟ್ಟುಕೊಳ್ಳಬಹುದಾಗಿದೆ.

ಸಮಸ್ತ ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆಯಾದ ಕನ್ನಡ ಸಾಹಿತ್ಯ ಪರಿಷತ್ತು ಓದುಗರ ಜ್ಞಾನದಾಹವನ್ನು ಈಡೇರಿಸಬೇಕು ಮತ್ತು ಎಲ್ಲಾ ಕನ್ನಡ ಪುಸ್ತಕಗಳು ಒಂದೆಡೆ ಸಿಗಬೇಕು ಎಂಬ ಮಹದೋದ್ದೇಶದಿಂದ ೧೯೧೫ರಲ್ಲಿ ಸರಸ್ವತೀಭಂಡಾರವನ್ನು ಪ್ರಾರಂಭಿಸಲಾಯಿತು. ಈಗ ಶತಮಾನವನ್ನು ಪೂರೈಸಿ ೧೧೦ನೇ ವಸಂತಕ್ಕೆ ಕಾಲಿಟ್ಟಿದೆ ಹಾಗೂ ಇಂದಿಗೂ ತನ್ನ ಹಿರಿಮೆ ಗರಿಮೆಯನ್ನು ಕಾಪಾಡಿಕೊಂಡು ಬಂದಿದೆ.

ಸರಸ್ವತೀ ಭಂಡಾರದ ೧೦೯ ವಸಂತಗಳ ಸುದೀರ್ಘ ಅವಧಿಯಲ್ಲಿ ವಿದ್ವಾಂಸರು, ಸಂಶೋಧಕರು, ವಿದ್ಯಾರ್ಥಿಗಳು, ಸ್ಪರ್ಧಾತ್ಮಕ ಪರೀಕ್ಷೆಯ ಅಭ್ಯರ್ಥಿಗಳು ಹಾಗೂ ಗಣ್ಯಾತಿಗಣ್ಯರು ಇಲ್ಲಿನ ಜ್ಞಾನಭಂಡಾರದ ಉಪಯೋಗವನ್ನು ಪಡೆದುಕೊಂಡಿದ್ದಾರೆ.

ದಿನಪತ್ರಿಕೆಗಳು, ನಿಯತಕಾಲಿಕೆಗಳು, ಮಕ್ಕಳ ಪುಸ್ತಕಗಳು, ಸಂಶೋಧನಾ ಗ್ರಂಥಗಳು ಹಾಗೂ ತಾಳೇಗರಿಯ ಹಸ್ತಪ್ರತಿಗಳನ್ನು ಒಳಗೊಂಡಿರುವ ವಿಸ್ತೃತ ಗ್ರಂಥಾಲಯವಾದ ಸರಸ್ವತೀ ಭಂಡಾರದಲ್ಲಿ ನೂರು ವರ್ಷಗಳಿಗೂ ಹಿಂದಿನ ಪ್ರಾಚೀನವಾದ, ಅಮೂಲ್ಯ ಹಾಗೂ ಅಪರೂಪದ ಪುಸ್ತಕಗಳ ನಿಧಿಯೇ ಅಡಗಿದೆ. ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ, ಕನ್ನಡ ನುಡಿ, ಪ್ರಬುದ್ಧ ಕರ್ನಾಟಕ, ಪ್ರಜಾಮತ, ಶರಣ ಸಂಪದ, ಸುಧಾ, ತರಂಗ, ಕರ್ಮವೀರ ಮುಂತಾದ ೨೦೦ಕ್ಕೂ ಅಧಿಕ ನಿಯತಕಾಲಿಕೆಗಳ ಹಳೆಯ ಸಂಪುಟಗಳನ್ನು ರಟ್ಟು ಕಟ್ಟಿಸಿ ಇರಿಸಲಾಗಿದೆ.

ಪ್ರಸ್ತುತ ೨೦೨೩ ಮಾರ್ಚ್ ೩೧ ರ ಅಂತ್ಯಕ್ಕೆ ಸರಸ್ವತೀ ಭಂಡಾರದಲ್ಲಿ ೧,೯೯,೯೦೬ (ಒಂದು ಲಕ್ಷದ ಒಂಬೋತ್ತುಸಾವಿರದ ಒಂಬೈನೂರ ಆರು) ಪುಸ್ತಕಗಳಿವೆ. ಕನ್ನಡ ನುಡಿ ಪತ್ರಿಕೆಗೆ ವಿಮರ್ಶೆಗಾಗಿ, ಸಾದರ ಸ್ವೀಕಾರಕ್ಕಾಗಿ, ಪರಿಷತ್ತಿನ ದತ್ತಿ ಪ್ರಶಸ್ತಿಗಳಿಗಾಗಿ ಬರುವ ಪುಸ್ತಕಗಳು, ಖರೀದಿಸುವ ಪುಸ್ತಕಗಳು, ನಗರ ಕೇಂದ್ರ ಗ್ರಂಥಾಲಯ ಪಶ್ಚಿಮ ವಲಯ ನೀಡುವ ಪುಸ್ತಕಗಳು ಹಾಗೂ ಪರಿಷತ್ತಿನ ಪ್ರಕಟಣೆಗಳು ಸರಸ್ವತೀ ಭಂಡಾರದಲ್ಲಿ ಸಂಗ್ರಹವಾಗುತ್ತಿವೆ.

ಸರಸ್ವತೀ ಭಂಡಾರದಲ್ಲಿ ಪ್ರಸ್ತುತ ೧,೧೭೦ (ಒಂದು ಸಾವಿರದ ಒಂದನೂರ ಎಪ್ಪತ್ತು) ಮಂದಿ ಸದಸ್ಯರಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ತಿನ ಸದಸ್ಯರು ಮಾತ್ರ ಸರಸ್ವತೀಭಂಡಾರದ ಸದಸ್ಯತ್ವ ಪಡೆಯಬಹುದು. ಇದಕ್ಕಾಗಿ ರೂ.೨೦೦ ಠೇವಣಿ, ಒಂದು ಫೋಟೋ ಹಾಗೂ ವಿಳಾಸ ದೃಢೀಕರಣ ನಕಲು ಪ್ರತಿ ನೀಡಬೇಕು. ಸದಸ್ಯತ್ವ ಪಡೆದ ನಂತರ ಎರಡು ಎರವಲು ಚೀಟಿ ನೀಡಲಾಗುವುದು. ಚೀಟಿ ಪಡೆದ ಸದಸ್ಯರು ಎರಡು ಪುಸ್ತಕಗಳನ್ನು ಎರವಲಾಗಿ ಪಡೆದು ೧೫ ದಿನಗಳವರೆಗೆ ತಮ್ಮ ಬಳಿ ಇಟ್ಟುಕೊಳ್ಳಬಹುದು. ನಂತರ ಹಿಂತಿರುಗಿಸಲು ತಡಮಾಡಿದರೆ ದಿನವೊಂದಕ್ಕೆ ಒಂದು ರೂಪಾಯಿಯಂತೆ ದಂಡ ಶುಲ್ಕ ವಿಧಿಸಲಾಗುವುದು.

ಸರಸ್ವತೀ ಭಂಡಾರದಲ್ಲಿ ಸಂಶೋಧನಾ ವಿಭಾಗ, ವಾಚನಾಲಯ ಮತು ಪುಸ್ತಕ ಎರವಲು ವಿಭಾಗ ಎಂಬ ಪ್ರಮುಖ ವಿಭಾಗಗಳಿವೆ. ಸಂಶೋಧನಾ ವಿಭಾಗದ ಪುಸ್ತಕಗಳನ್ನು ಎರವಲು ನೀಡಲಾಗುವುದಿಲ್ಲ, ಇಲ್ಲೇ ಕುಳಿತು ಪರಾಮರ್ಶಿಸಬೇಕು.

**ಸರಸ್ವತೀ ಭಂಡಾರದ ಸಮಯ:**

ಬೆಳಿಗ್ಗೆ ೧೦.೦೦ ರಿಂದ ಸಂಜೆ ೫.೦೦ ಗಂಟೆ ರವರೆಗೆ.

**ಊಟದ ವಿರಾಮ:** ಮಧ್ಯಾಹ್ನ ೧.೩೦ ರಿಂದ ೨.೧೫ ರವರೆಗೆ ಇರುತ್ತದೆ,

ಸರ್ಕಾರದಿಂದ ಅಧಿಕೃತವಾಗಿ ಘೋಷಿಸಿರುವ ರಜೆಗಳು, ೪ನೇ ಶನಿವಾರ ಹಾಗೂ ಎಲ್ಲಾ ಭಾನುವಾರಗಳು ಸರಸ್ವತೀಭಂಡಾರಕ್ಕೆ ರಜೆ ಇರುತ್ತದೆ.

**ಪುಸ್ತಕ ಮಾರಾಟ ವಿಭಾಗ:**

ಪುಸ್ತಕ ಮಾರಾಟ ವಿಭಾಗವು ೧೯೬೬-೧೯೭೮ರ ಅವಧಿಯಲ್ಲಿ ಪ್ರಾರಂಭವಾಯಿತು. ಈ ವಿಭಾಗದಲ್ಲಿ ಹಳಗನ್ನಡ ಗದ್ಯಾನುವಾದಗಳು, ಕನ್ನಡ ರತ್ನಕೋಶ, ಸಂಕ್ಷಿಪ್ತ ಕನ್ನಡ ನಿಘಂಟು, ಸಂಕ್ಷಿಪ್ತ ಇಂಗ್ಲಿಷ್ ನಿಘಂಟು ಹಾಗೂ ಬೃಹತ್ ಕನ್ನಡ-ಕನ್ನಡ ನಿಘಂಟು (೦೮ ಸಂಪುಟಗಳು), ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆ ಸಂಪುಟಗಳು, ಸಮ್ಮೇಳನಾಧ್ಯಕ್ಷರಗಳ ಭಾಷಣಗಳು, ಮಹಿಳಾ ಸಾಹಿತ್ಯ ಸಂಪುಟಗಳು, ದಲಿತ ಸಾಹಿತ್ಯ ಸಂಪುಟಗಳು, ಶತಮಾನೋತ್ಸವ ಮಾಲಿಕೆ, ಜೀವನ ಚರಿತ್ರೆಗಳು, ಕ.ಸಾ.ಪ. ಪರೀಕ್ಷೆ ಪುಸ್ತಕಗಳು, ವಿದ್ಯಾರ್ಥಿಗಳಿಗೆ, ಜನಸಾಮಾನ್ಯರಿಗೆ, ಭಾಷಾಭ್ಯಾಸಿಗಳಿಗೆ, ಸಂಶೋಧಕರಿಗೆ, ವಿದ್ವಾಂಸರಿಗೆ, ಉಪಯುಕ್ತವಾಗುವ ಹತ್ತಾರು ನಿಘಂಟುಗಳನ್ನು ಪರಿಷತ್ತಿನ ವತಿಯಿಂದ ಪ್ರಕಟಿಸಲಾಗಿದ್ದು ಮಾರಾಟಕ್ಕೆ ಲಭ್ಯವಿರುತ್ತವೆ. ಮಾರಾಟ ವಿಭಾಗದಲ್ಲಿ ಲಭ್ಯವಿರುವ ಆಯ್ದ ಪುಸ್ತಕಗಳಿಗೆ ಕ.ಸಾ.ಪ.ದ ಸದಸ್ಯರಿಗೆ ಶೇ. ೩೦% ರಷ್ಟು ಮತ್ತು ಸಾರ್ವಜನಿಕರಿಗೆ ಶೇ. ೧೦% ರಷ್ಟು ರಿಯಾಯತಿಯನ್ನು ನೀಡಲಾಗುತ್ತಿದೆ.

ಅಲ್ಲದೇ ದಿನಾಂಕ: ೨೨-೦೪-೨೦೨೪ರ ಕಛೇರಿ ಆದೇಶದನ್ವಯ ವಿಶೇಷವಾಗಿ ಈ ಕೆಳಕಂಡ ತಿಂಗಳುಗಳಲ್ಲಿ ರಿಯಾಯಿತಿಯನ್ನು ನೀಡಲಾಗಿದೆ. ದಿನಾಂಕ: ೧೦-೦೪-೨೦೨೪ ರಿಂದ ಎಲ್ಲಾ ದಿನಗಳಂದು ಬೆಳಿಗ್ಗೆ ೧೦.೦೦ ರಿಂದ ಸಂಜೆ ೦೫.೩೦ರವರೆಗೆ ಪುಸ್ತಕ ಮಾರಾಟ ವಿಭಾಗವು ತೆರೆದಿರುತ್ತದೆ.